**<u>ದಿನಾಂಕಃ 23.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀ ಎಂ.ಎಂ. ವಕೀಲರಿಂದಃ</u>**

1) 1 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ. ನನ್ನ ತಾತನ ಹೆಸರು ವಾಹಬ್ ಖಾನ್. ನನ್ನ ತಾತಾ ವಾಹಬ್ ಖಾನ್ ರವರಿಗೆ ಇಬ್ಬರು ಗಂಡು ಮಕ್ಕಳು. ಅವರೆಂದರೆ ಅಹಮದ್ ಅಲಿ ಖಾನ್ ಮತ್ತು ರಸೀಬ್ ಖಾನ್. ನನ್ನ ತಂದೆ ಅಹಮದ್ ಅಲಿ ಖಾನ್. ರಸೀಬ್ ಖಾನ್ 1 ನೇ ಪ್ರತಿವಾದಿಯ ತಂದೆ. ಸದರಿ ವಿಚಾರವನ್ನು ವಾದಪತ್ರದಲ್ಲಿ ತಿಳಿಸಿರುವುದಿಲ್ಲ.

2) ದಾವಾ ಸ್ವತ್ತಿನ ಮೂಲ ಖಾನೇಷುಮಾರಿ ಸಂ : 79 ಎಂದರೆ ಸರಿ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣದ ಕಂದಾಯ ದಾಖಲೆಯು 1 ನೇ ವಾದಿಯ ಹೆಸರಿನಲ್ಲಿ 1955 ರಿಂದಲೂ ಇತ್ತು. ಯಾವ ವರ್ಷದಿಂದ ಯಾವ ವರ್ಷದವರೆಗಿನ ಕಂದಾಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಸಲ್ಲಿಸಿರುವ ಕಂದಾಯ ದಾಖಲೆಗಳಲ್ಲಿಯೂ ಸಹ 1 ನೇ ಪ್ರತಿವಾದಿಯ ಹೆಸರು ನಮೂದು ಇದೆ ಎಂದರೆ ಸರಿ.

3) ದಾವಾ ಸ್ವತ್ತಿನ ಮೂಲ ಖಾನೇಷುಮಾರಿ ಸಂ : 79 ಎಂಬುದು ಖಾತಾ ನಂಬರ್ 117 ಮತ್ತು 118 ರಂತೆ ಯಾವಾಗ ಬದಲಾವಣೆ ಆಯಿತು ಎಂದು ನನಗೆ ಗೊತ್ತಿಲ್ಲ. ಖಾತಾ ನಂಬರ್ 79 ನನ್ನ ತಾತಾ ವಾಹಬ್ ಖಾನ್ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ವಾಹಬ್ ಖಾನ್ ರವರು 1966 ರಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ತಂದೆಗೆ ಸೇರಿದಂತೆ ಒಂದು ವ್ಯವಸ್ಥಾ ಪತ್ರವನ್ನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವ್ಯವಸ್ಥಾ ಪತ್ರದ ಮೇರೆಗೆ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ತಂದೆ ಇಬ್ಬರಿಗೂ ದಾವಾ ಸ್ವತ್ತಿನಲ್ಲಿ ತಲಾ ಅರ್ಧ ಹಿಸ್ಸೆಗೆ ಹಕ್ಕನ್ನು ನೀಡಿದ್ದರು ಎಂದರೆ ಸರಿಯಲ್ಲ.ಅದರಂತೆ ದಾವಾ ಸ್ವತ್ತಿನಲ್ಲಿ ದಕ್ಷಿಣ ಭಾಗ ನನ್ನ ತಂದೆಗೆ ಮತ್ತು ಉತ್ತರ ಭಾಗ 1 ನೇ ಪ್ರತಿವಾದಿಯ ತಂದೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಭಾಗದಲ್ಲಿ ನಾವು ಸ್ವಾಧೀನ ಹೊಂದಿ ಅನುಭೋಗಿಸುತ್ತಾ ಬಂದಿದ್ದೇವೆ ಎಂದರೆ

ಸರಿಯಲ್ಲ. ವ್ಯವಸ್ಥಾ ಪತ್ರದ ಆಧಾರದ ಮೇರೆಗೆ ಕಂದಾಯ ದಾಖಲೆಗಳು ಬದಲಾವಣೆ ಆಗಿದೆ ಎಂದರೆ ಸರಿಯಲ್ಲ.

2) 1955 ರಿಂದ ನನ್ನ ತಾಯಿಯ ಹೆಸರಿಗೆ ಖಾನೇಷುಮಾರಿ ಸಂ : 79 ರ ಖಾತೆ ಬಂದಿರುತ್ತದೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 1955 ರಲ್ಲಿ ನನ್ನ ತಾಯಿಗೆ 15 ವರ್ಷ ವಯಸ್ಸು ಆಗಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿ ಆಗ ಅಪ್ರಾಪ್ತೆ ಆಗಿದ್ದ ಕಾರಣ ದಾವಾ ಸ್ವತ್ತಿನ ಖಾತೆ ನನ್ನ ತಾತನ ಹೆಸರಿಗೆ ಆಗಿತ್ತು ಎಂದರೆ ಸರಿಯಲ್ಲ. ಆದ ಕಾರಣ ನನ್ನ ತಾಯಿಯ ಹೆಸರಿಗೆ ಖಾತೆ ದಾಖಲು ಆಗಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ವಾಹಬ್ ಖಾನ್ ರವರು ನನ್ನ ತಾಯಿಯ ಹೆಸರಿನಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. 1966 ರಲ್ಲಿ ಆದ ವ್ಯವಸ್ಥಾ ಪತ್ರಕ್ಕೆ ನನ್ನ ತಾಯಿ ಸಹ ಸಮ್ಮತಿ ನೀಡಿದ್ದಾರೆ ಎಂದರೆ ಸರಿಯಲ್ಲ. ಖಾನೇಷುಮಾರಿ ಸಂ : 118 ನಮ್ಮ ತಂದೆಯ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿ.

3) 1 ನೇ ಪ್ರತಿವಾದಿಯ ತಂದೆ ತನ್ನ ಭಾಗಕ್ಕೆ ಬಂದ ಹಿಸ್ಸೆಯನ್ನು 1 ನೇ ಪ್ರತಿವಾದಿಗೆ ಹಕ್ಕು ನಿವೃತ್ತಿ ಪತ್ರದ ಮುಖಾಂತರ ನೀಡಿದ್ದಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಮೇರೆಗೆ ಖಾನೇಷುಮಾರಿ ಸಂ : 117 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದು ಸುಳ್ಳಿನಿಂದ ಕೂಡಿದೆ ಎಂದು ನುಡಿಯುತ್ತಾರೆ. 1986 ರಲ್ಲಿ 1 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಖಾತೆ ಬದಲಾದ ಕುರಿತು ನಾನು ಅಥವಾ ನನ್ನ ತಾಯಿ ಅದನ್ನು ಪ್ರಶ್ನೆ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ಆದ ಖಾತೆಯನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ಈ ಹಿಂದೆ ಆದ ವ್ಯವಸ್ಥಾ ಪತ್ರದ ಮೇರೆಗೆ ಮೊದಲು 1 ನೇ ಪ್ರತಿವಾದಿಯ ತಂದೆ ಮತ್ತು ಈಗ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಉತ್ತರ ಭಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಉಳಿದಂತೆ ದಕ್ಷಿಣ ಭಾಗದ ಸ್ವತ್ತಿನಲ್ಲಿ ಮಾತ್ರ ನಾನು ಮತ್ತು ನನ್ನ ತಾಯಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ.

3) 1955 ರಲ್ಲಿ ಆದ ಕ್ರಯಪತ್ರವು ಊರ್ಜಿತ ಆಗಿರದ ಕಾರಣ ದಾವಾ ಸ್ವತ್ತಿನ ಸಂಪೂರ್ಣ ವಿಸ್ತೀರ್ಣಕ್ಕೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪಂಚಾಯಿತಿ

ದಾಖಲೆಗಳಲ್ಲಿ ನಮ್ಮ ಮನೆಯ ಉತ್ತರಕ್ಕೆ 1 ನೇ ಪ್ರತಿವಾದಿಯ ಮನೆ ಇರುವುದಾಗಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತನಿಗೆ ಜಮೀನು ಇತ್ತು. ಸದರಿ ಜಮೀನಿನ ಖಾತೆಗಳು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ನೆನಪಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಇದ್ದ ಜಮೀನುಗಳ ಖಾತೆ ನನ್ನ ಹೆಸರಿಗೆ ಇದೆ ಎಂದರೆ ಸರಿ. 1966 ರಲ್ಲಿ ಆದ ವ್ಯವಸ್ಥಾ ಪತ್ರದ ಮೇರೆಗೆ ಜಮೀನಿನ ಖಾತೆಗಳು ನನ್ನ ತಂದೆಯ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾನಂತರ ಸದರಿ ಜಮೀನಿನ ಖಾತೆಗಳು ನಮ್ಮ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ. ಓ.ಎಸ್. 222/2017 ರಂತೆ 1 ನೇ ಪ್ರತಿವಾದಿ ನನ್ನ ವಿರುದ್ದ ಇದೇ ನ್ಯಾಯಾಲಯದಲ್ಲಿ ಒಂದು ದಾವೆ ಹೂಡಿದ್ದಾರೆ ಎಂದರೆ ಸರಿ. ಖಾನೇಷುಮಾರಿ ಸಂ ః 117 ರ ಜಾಗದ ಒಂದು ಭಾಗವನ್ನು 1 ನೇ ಪ್ರತಿವಾದಿ ನನ್ನ ಹೆಸರಿಗೆ ಬೋಗ್ಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬೋಗ್ಯದ ಬಿಡುಗಡೆಗಾಗಿ ಓ.ಎಸ್. ನಂ ః 292/2021 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ.

4) ದಾವಾ ಸ್ವತ್ತಿನ ಮೇಲೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂః 164/2021 ರಂತೆ ಮಹಬೂಬ್ ಖಾನ್ ರವರ ಮಗ ಫಜಲ್ ಖಾನ್ 1ನೇ ಪ್ರತಿವಾದಿಯ ವಿರುದ್ದ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ನಾನೇ 1 ನೇ ಪ್ರತಿವಾದಿಯ ವಿರುದ್ದ ಮಹಬೂಬ್ ಖಾನ್ ರವರ ಮಗ ಫಜಲ್ ಖಾನ್ ಮುಖಾಂತರ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಾಯಿ ಸಹ ದಾವಾ ಸ್ವತ್ತಿನ ಮೇಲೆ ಒಂದು ಪ್ರಕರಣ ಹೂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣ ಭಾಗದಲ್ಲಿ ಮಾತ್ರ ನಾನು ಮತ್ತು ನನ್ನ ತಾಯಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಪೂರ್ಣ ದಾವಾ ಸ್ವತ್ತಿನಲ್ಲಿಸ್ವಾಧೀನ ಇರುವುದಾಗಿ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಉತ್ತರಕ್ಕೆ ರಾಜಬೀದಿ ಇದೆ ಎಂದು ಸುಳ್ಳಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಉತ್ತರಕ್ಕೆ 1 ನೇ ಪ್ರತಿವಾದಿಗೆ ಸೇರಿದ ಸ್ವತ್ತು ಇದೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ತಂದೆಗೆ ಸೇರಿದ ಸ್ವತ್ತಿನ ಖಾತೆಯನ್ನು ಅಕ್ರಮವಾಗಿ ಮಾಡಿಸಿಕೊಂಡ ಕಾರಣ, ಆತ ಅದನ್ನು ಪ್ರಶ್ನೆ ಮಾಡಿದ್ದು ಅದಕ್ಕಾಗಿಯೇ ನಾನು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸೇರಿದ ಅರ್ಧ ಹಿಸ್ಸೆಯನ್ನು ಸೇರಿಸಿ ನಾನು ಈ ದಾವೆಯನ್ನು ಹೂಡಿದ್ದೇನೆ ಎಂದರೆ

ಸರಿಯಲ್ಲ. ಖಾನೇಷುಮಾರಿ ಸಂ:119 ನ್ನು ತಾಲ್ಲೂಕು ಪಂಚಾಯಿತಿ ನ್ಯಾಯಾಲಯದಲ್ಲಿ ವಜಾ ಮಾಡಿದ್ದಾರೆ ಎಂದರೆ ಸರಿ. ಸದರಿ ಖಾತೆಯನ್ನು ಅಕ್ರಮವಾಗಿ ಮಾಡಿಸಿಕೊಂಡಿದ್ದೆನು ಎಂದು ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ಖಾತೆಯನ್ನು ವಜಾ ಮಾಡಿದ ನಂತರ ನಾನು ಅಪೀಲನ್ನು ಮಾಡಿರುವುದಿಲ್ಲ. ಖಾನೇಷುಮಾರಿ ಸಂ : 117 ಮತ್ತು 118 ಕ್ಕೆ ಸಂಬಂಧಿಸಿದಂತೆ ಕಂದಾಯ ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಇ-ಖಾತೆ ಆಗಿರುವುದಿಲ್ಲ. ದಾವಾ ಸ್ವತ್ತಿನ ಉತ್ತರ ಭಾಗಕ್ಕೆ ಮಾತ್ರ ನಾನು ಮತ್ತು ನನ್ನ ತಂದೆ ಮಾಲೀಕರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣಕ್ಕೆ ನಾನಾಗಲೀ, ನನ್ನ ತಂದೆಯಾಗಲೀ ಹಕ್ಕುದಾರರು ಮತ್ತು ಸ್ವಾಧೀನದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).**

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**